



ಪ್ರತಿ ಸ್ಮಾರಕ ಸಮಾಧಿಯು ಎತ್ತರದ ವೇದಿಕೆಯ ಮೇಲೆ ನಿರ್ಮಾಣಗೊಂಡಿದ್ದು, ಅದರ ಮೇಲೆ ಗುಮ್ಮಟ ಕಾಣಿಸುತ್ತದೆ. ಸುತ್ತಲಿನ ಸ್ತಂಭಗಳು ನಿಖರ ಸಮಮಿತಿಯ ಶೈಲಿಯಲ್ಲಿ ವಿನ್ಯಾಸಗೊಂಡಿವೆ. ಮಧ್ಯಭಾಗದಲ್ಲಿ 'ಸ್ಮಾರಕ ಗರ್ಭಗುಡಿ' ಇದ್ದು, ಅದರಲ್ಲಿ ಶಿಲಾಲೇಖನ ಅಥವಾ ರಾಜನ ಪ್ರತಿಮೆಯಂತಹ ಸ್ಮರಣಾರ್ಥ ಚಿಹ್ನೆಗಳನ್ನು ಕಾಣಬಹುದು. ಗೋಡೆಗಳು ಮತ್ತು ಸ್ತಂಭಗಳ ಮೇಲೆ ದೇವತೆಗಳು, ವೀರರು, ಸಂಗೀತಗಾರರು ಮತ್ತು ನೃತ್ಯಗಾತಿಯರ ಶಿಲ್ಪಗಳು ಕಾಣುತ್ತವೆ. ಕೆಲವು ಶಿಲ್ಪಗಳಲ್ಲಿ ಯುದ್ಧದ ದೃಶ್ಯಗಳು, ರಾಣಿ ಮತ್ತು ದಾಸಿಯರ ಸಂಭಾಷಣೆ, ಹೂಮಾಲೆಯ ವಿನ್ಯಾಸಗಳು ಸೇರಿದಂತೆ ಜೀವನದ ವಿವಿಧ ಆಯಾಮಗಳನ್ನು ಕೆತ್ತಲಾಗಿದೆ.

ಈ ಶಿಲ್ಪಗಳು ಕೇವಲ ಆಲಂಕಾರಿಕ ದೃಷ್ಟಿಯಿಂದಲ್ಲದೆ, ಆ ಕಾಲದ ಸಮಾಜದ ಸಂಸ್ಕೃತಿ, ಉಡುಪು, ಸಂಗೀತ ಮತ್ತು ಸ್ತ್ರೀಪಾತ್ರಗಳ ಸಾಂಸ್ಕೃತಿಕ ಸ್ಥಾನವನ್ನು ಪ್ರತಿಬಿಂಬಿಸುತ್ತವೆ.

## ಸಾಂಸ್ಕೃತಿಕ ಮತ್ತು ಧಾರ್ಮಿಕ ಅರ್ಥ

ಚತ್ತರ್ಧಿಗಳ ನಿರ್ಮಾಣ ಕೇವಲ ಸ್ಮಾರಕ ನಿರ್ಮಾಣದ ಅಭಿವ್ಯಕ್ತಿಯಲ್ಲ; ಅದು ಆತ್ಮಸ್ಮರಣೆಯ ವಿಧಿಯಾಗಿದೆ. ಹಿಂದೂ ಧರ್ಮದ ಪ್ರಕಾರ, ರಾಜರು ಅಥವಾ ವೀರರು ಮೃತರಾದ ನಂತರ ಅವರ ಪಾರ್ಥಿವ ಶರೀರವನ್ನು ದಹಿಸಿ, ಆ ಸ್ಥಳದಲ್ಲಿ ಸ್ಮಾರಕ ರೂಪದ ಚತ್ತರ್ಧಿಗಳನ್ನು ನಿರ್ಮಿಸುತ್ತಿದ್ದರು.

ಭುಜ್‌ನ ಶಿಲ್ಪಿಗಳು ವಂಶಪಾರಂಪರಿಕವಾಗಿ ಬಂದ ಶಿಲ್ಪಕಲೆಯನ್ನು ಮುಂದುವರಿಸಿದ್ದರು. ಪ್ರತಿ ಕಲ್ಲು, ಪ್ರತಿ ಜಾಲಿಯ ಹಿಂದೆ ರಾಜನ ವೀರಗಾಥೆ, ರಾಣಿಯ ತ್ಯಾಗ, ನರ್ತಕಿಯ ಸೌಂದರ್ಯ, ಯೋಧನ ಬಲಿದಾನದ ಕಥೆಗಳಿವೆ. ಶಿಲ್ಪಿಗಳು ಕಲ್ಲಿನ ನೈಸರ್ಗಿಕ ತಂತುಗಳನ್ನು ಗುರುತಿಸಿ, ಅದಕ್ಕೆ ಜೀವ ನೀಡುವಂತಹ ದೃಷ್ಟಿಕೋನ ಹೊಂದಿದ್ದರು. ಅದೇ ಕಾರಣದಿಂದ ಇಂದಿಗೂ ಆ ಶಿಲ್ಪಗಳಲ್ಲಿ ಚೈತನ್ಯ ಸ್ಪಷ್ಟವಾಗಿ ಕಾಣುತ್ತದೆ.

2001ರಲ್ಲಿ ಗುಜರಾತಿನಲ್ಲಿ ಸಂಭವಿಸಿದ ಭೂಕಂಪವು ಭುಜ್‌ನ ಚತ್ತರ್ಧಿಗಳಿಗೆ ಭಾರೀ ಹಾನಿ ಉಂಟುಮಾಡಿತು. ಅನೇಕ ಸ್ತಂಭಗಳು ಮತ್ತು ಗುಂಬಜುಗಳು ಧರಾಶಾಹಿಯಾದವು. ಕೆಲವು ಶಿಲ್ಪಗಳು ತುಂಡಾದವು. ಆದಾಗ್ಯೂ, ಸ್ಥಳೀಯ ಆಡಳಿತ, ಪುರಾತತ್ವ ಇಲಾಖೆ ಮತ್ತು ಇತಿಹಾಸಾಸಕ್ತರು ಸೇರಿಕೊಂಡು ಅವುಗಳ ಪುನರ್‌ನಿರ್ಮಾಣದ ಕಾರ್ಯ ಆರಂಭಿಸಿದರು.

ಇಂದಿಗೂ ಕೆಲವು ಭಾಗಗಳು ಅವಶೇಷಗಳ ರೂಪದಲ್ಲಿದ್ದರೂ, ಅವುಗಳ ಅಸ್ತಿತ್ವವೇ ಭೂತಕಾಲದ ಮಹಿಮೆ ಮತ್ತು ಮಾನವ ಶಿಲ್ಪಕಲೆಯ ಅಮರತೆಯನ್ನು ಸಾರುತ್ತಿವೆ.

ಇದು ಭುಜ್‌ನ ಪ್ರಮುಖ ಪ್ರವಾಸಿ ತಾಣವಾಗಿದೆ. ಹಮೀರ್ ಸರ್ ಸರೋವರದ ಪಶ್ಚಿಮ ತೀರದಲ್ಲಿ ಇರುವ ಈ ಚತ್ತರ್ಧಿಗಳು ಸೂರ್ಯಾಸ್ತದ ಸಮಯದಲ್ಲಿ ಬಹಳ ಮನಮೋಹಕವಾಗಿ ಕಾಣಿಸುತ್ತವೆ. ಮಾರ್ಬಲ್ ಮತ್ತು ಸ್ಯಾಂಡ್‌ಸ್ಟೋನ್‌ನ ಮೇಲಿನ ಬೆಳಕು ಮತ್ತು ನೆರಳಿನ ಆಟವು ಅದ್ಭುತ ದೃಶ್ಯವೈಭವವನ್ನು ಸೃಷ್ಟಿಸುತ್ತದೆ. ಪಾರಂಪರಿಕ ಫೋಟೋಗ್ರಫಿ, ಇತಿಹಾಸ ಅಧ್ಯಯನ ಮತ್ತು ವಾಸ್ತುಶಿಲ್ಪದ ಅಭ್ಯಾಸಕ್ಕಾಗಿ ಇದು ಒಂದು ಜೀವಂತ ಕ್ಯಾಂಪಸ್ ಆಗಿದೆ.

## ಕಛ್ ವಾಸ್ತುಶಿಲ್ಪಕ್ಕೆ ಪಾರಂಪರಿಕ ಗರಿ

ಭುಜ್ ಚತ್ತರ್ಧಿಗಳು ಕೇವಲ ಒಂದು ನಗರ ಅಥವಾ ರಾಜವಂಶದ ಸ್ಮಾರಕಗಳಲ್ಲ. ಅವು ಭಾರತದ ಪಶ್ಚಿಮ ಭಾಗದ ರಾಜವಂಶೀಯ ವಾಸ್ತುಶಿಲ್ಪದ ಬೆಳವಣಿಗೆಗೆ ಸಾಕ್ಷಿಯಾಗಿವೆ. ರಜಪೂತರ ಶೌರ್ಯ, ಮುಘಲರ ಸೌಂದರ್ಯಬೋಧನೆ ಮತ್ತು ಗುಜರಾತಿ ಶಿಲ್ಪಕಲೆಯ ಸರಳತೆ— ಈ ಮೂರೂ ಶಕ್ತಿಗಳು ಒಂದಾಗಿ ಮಿಶ್ರಣಗೊಂಡಿರುವ ಸ್ಥಳವೇ ಭುಜ್ ಚತ್ತರ್ಧಿಗಳು.

ಭುಜ್‌ನ ಸ್ಮಾರಕ ಸಮಾಧಿಗಳು ಕಛ್‌ನ ಶಿಲ್ಪಕಲೆಯ ಅತ್ಯುನ್ನತ ಸಾಧನೆಯಾಗಿದ್ದು, ಇವು ಕೇವಲ ಇತಿಹಾಸದ ಅವಶೇಷವಲ್ಲ, ಜೀವಂತ ಪಠ್ಯಪುಸ್ತಕಗಳಂತಿವೆ. ಕಾಲ ಬದಲಾಗಬಹುದು, ರಾಜ್ಯಗಳು ನಶಿಸಿಹೋಗಬಹುದು, ಆದರೆ ಕಲೆ ಮತ್ತು ಆತ್ಮಸ್ಮರಣೆ ಅಮರವಾಗಿರುತ್ತದೆ. ಇಂದಿನ ಯುಗದಲ್ಲಿ ಈ ಸ್ಮಾರಕಗಳು ಮೌನದಲ್ಲೇ ಮಾತಾಡುತ್ತಿವೆ. 'ಮಾನವ ಸಾಯಬಹುದು, ಆದರೆ ಅವನ ಕೃತಿಯು ಕಾಲದೊಳಗೆ ಉಳಿಯುತ್ತದೆ' ಎಂಬ ಶಾಶ್ವತ ಸತ್ಯವನ್ನು ನೆನಪಿಸುತ್ತಿವೆ.